ಶ್ರೀ ಕೆ. ಅಭಯಚಂದ್ರ: ಈಗಾಗಲೇ ಎರಡು ವರ್ಷ ಕಳೆದರೂ ಇನ್ನೂ ನಮ್ಮ ಈ ಕಾರ್ಯಕ್ರಮ ಆಗಿರುವುದಿಲ್ಲ.

ಶ್ರೀ ಎಂ.ವೈ. ಘೋರ್ಪಡೆ: ನಾನೀಗಾಗಲೇ ಹೇಳಿದಂತೆ ಹೊಸ ಯೋಜನೆಗೆ ಎಷ್ಟು ದುಡ್ಡು ಬೇಕು ಎನ್ನುವ ಅಂದಾಜನ್ನು ಮಾಡಿ ಮೂರು ತಿಂಗಳಲ್ಲಿ ಜೆಡ್‌ಪಿ ಯ ಸಿ ಇ ಓ ರವರು ಕಳುಹಿಸಿ ಕೊಡಬೇಕೆಂದು ನಾವು ಆದೇಶ ಕೊಡುತ್ತೇವೆ ಇದಕ್ಕಿಂತಲೂ ಹೆಚ್ಚಿಗೆ ನಾವೇನು ಮಾಡುವುದಕ್ಕೆ ಸಾಧ್ಯ?

ಶ್ರೀ ಕೆ. ಅಭಯಚಂದ್ರ: ನಿಮ್ಮಿಂದಲೇ 2.17 ಕೋಟಿ ಪ್ರಸ್ತಾವನೆ ಬಂದರೆ ನಾವು ಮುಗಿಸುತ್ತೇವೆ ಎನ್ನುವುದು ಬಂದಿದೆ.

ಶ್ರೀ ಎಂ.ವೈ. ಘೋರ್ಪಡೆ: ಸಬ್‌ಮಿಷನ್ ಅಡಿಯಲ್ಲಿ ಪ್ರಸ್ತಾವನೆ ಬಂದಿಲ್ಲ.

ಅಧ್ಯಕ್ಷರು: ಮೂರು ತಿಂಗಳಲ್ಲಿ ಮುಗಿಸಿಕೊಡುತ್ತೇವೆಂದು ಮಾನ್ಯ ಮಂತ್ರಿಯವರು ಹೇಳುತ್ತಿದ್ದಾರಲ್ಲ ಬಿಡಿ ಮುಗಿಸಿ ಕೊಡುತ್ತಾರೆ. ಮುಂದಿನ ಪ್ರಶ್ನೆ ಮಾನ್ಯ ಕೃಷ್ಣಮೂರ್ತಿಯವರು ಕೇಳಬೇಕು.

ಚಾಮರಾಜನಗರ ತಾಲ್ಲೂಕಿನ ಜಿಲ್ಲಾ ಪಂಚಾಯತ್ ರಸ್ತೆಗಳ ಅಭಿವೃದ್ಧಿ

ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೇಮಾರನಹಳ್ಳಿ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರ ತಾಲ್ಲೂಕು ಚಂದಕವಾಡಿ ಹೋಬಳಿ ಹಾಗೂ ಸಂತೇಮರಹಳ್ಳಿ ಮತ್ತು ನಂಜನಗೂಡು ತಾಲ್ಲೂಕು ಕಾವಲಂದೆ ಹೋಬಳಿಯನ್ನೊಳಗೊಂಡ ಸಂತೇಮರಹಳ್ಳಿ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಜಿಲ್ಲಾ ಪಂಚಾಯತ್ ರಸ್ತೆಗಳು ಯಾವುವು;

ಆ) ಈ ರಸ್ತೆಗಳಲ್ಲಿ ಎಷ್ಟು ಕಿ.ಮೀ. ಉದ್ದದ ಯಾವ ಯಾವ ರಸ್ತೆ ಡಾಂಬರೀಕರಣವಾಗಿದೆ; ಡಾಂಬರೀಕರಣವಾಗದೇ ಉಳಿದಿರುವ ರಸ್ತೆಗಳು ಯಾವುವು;

ಇ) 1998-99 ರಿಂದ ಈವರೆಗೆ ಅಂದರೆ 2000-01 ರವರೆಗೆ ರಸ್ತೆಗಳ ದುರಸ್ತಿಗಾಗಿ ಮಂಜೂರಾಗಿರುವ ಹಣವೆಷ್ಟು; (ವರ್ಷವಾರು ವಿವರ ನೀಡುವುದು)

ಈ) ಯಾವ ಯಾವ ರಸ್ತೆಗಳು ಯಾವ ಯಾವ ಸಾಲಿನಲ್ಲಿ ಡಾಂಬರೀಕರಣಗೊಂಡಿದೆ. ಉಳಿದ ರಸ್ತೆಗಳನ್ನು ಡಾಂಬರೀಕರಣಗೊಳಿಸಲು ಹಣ ಬಿಡುಗಡೆ ಮಾಡಲಾಗಿದೆಯೆ; ಹಾಗೂ ಈ ಸಾಲಿನಲ್ಲಿ ಸದರಿ ರಸ್ತೆಗಳ ದುರಸ್ತಿಗಾಗಿ ಬಿಡುಗಡೆ ಮಾಡಲಾಗಿರುವ ಹಣವೆಷ್ಟು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಚಾಮರಾಜನಗರ ತಾಲ್ಲೂಕಿನ ಚಂದಕವಾಡಿ ಹಾಗೂ ಸಂತೇಮರಹಳ್ಳಿ ಹೋಬಳಿಗಳು ಮತ್ತು ನಂಜನಗೂಡು ತಾಲ್ಲೂಕಿನ ಕಾವಲಂದೆ ಹೋಬಳಿಯನ್ನೊಳಗೊಂಡ

ಸಂತೇಮರಹಳ್ಳಿ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಜಿಲ್ಲಾಪಂಚಾಯತ್ ರಸ್ತೆಗಳ ಪಟ್ಟಿಯನ್ನು ಅನುಬಂಧ 'ಎ' ನಲ್ಲಿ ಲಗತ್ತಿಸಿದೆ.

ಆ) ಈ ರಸ್ತೆಗಳಲ್ಲಿ ಒಟ್ಟು 102.80 ಕಿ.ಮೀ. ರಸ್ತೆ ಡಾಂಬರೀಕರಣವಾಗಿದೆ. 346.50 ಕಿ.ಮೀ. ಉದ್ದದ ರಸ್ತೆಗಳನ್ನು ಡಾಂಬರೀಕರಿಸಲಾಗಿಲ್ಲ. ವಿವರಗಳನ್ನು ಅನುಬಂಧ 'ಎ' ನಲ್ಲಿ ಕೊಡಲಾಗಿದೆ.

ಇ) ರಸ್ತೆಗಳ ದುರಸ್ತಿಗಾಗಿ ವರ್ಷವಾರು ಮಂಜೂರಾಗಿರುವ ಹಣದ ವಿವರ ಈ ಕೆಳಗಿನಂತಿರುತ್ತದೆ.

ವರ್ಷ	ಮಂಜೂರಾದ ಮೊತ್ತ (ರೂ. ಲಕ್ಷಗಳಲ್ಲಿ)
1998-99	22.99
1999-2000	25.45
2000-01	31.03

ಈ) ಡಾಂಬರೀಕರಣಗೊಂಡ ರಸ್ತೆಗಳ ಪಟ್ಟಿಯನ್ನು ಅನುಬಂಧ 'ಬಿ' ನಲ್ಲಿ ಲಗತ್ತಿಸಲಾಗಿದೆ.

ಪ್ರಸಕ್ತ ಸಾಲಿನಲ್ಲಿ ಪ್ರತಿ ತಾಲ್ಲೂಕಿಗೆ 100 ಲಕ್ಷ ಗ್ರಾಮೀಣ ಸಂಪರ್ಕ ಜಾಲದಡಿ 30 ಲಕ್ಷಕ್ಕೆ 9.80 ಕಿ.ಮೀ. ಡಾಂಬರು ಮಾಡಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಈ ಸಾಲಿನಲ್ಲಿ ಸದರಿ ರಸ್ತೆಗಳ ದುರಸ್ತಿಗಾಗಿ ರೂ. 31.03 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಅನುಬಂಧ 'ಎ'

ಕ್ರ.ಸಂ.	ಕಾಮಗಾರಿಯ ವಿವರ	ರಸ್ತೆಯ ಉದ್ದ ಕಿ.ಮೀ. ಗಳಲ್ಲಿ	ಈಗಾಗಲೇ ಮಾಡಿರುವ ಡಾಂಬರು ಕಿಮೀಗಳಲ್ಲಿ	ಉಳಿಕೆ ಡಾಂಬರೀಕರಣ ಮಾಡಬೇಕಾಗಿರುವುದು
1	2	3	4	5
1.	ಆಲೂರು-ಹೊಮ್ಮ-ಕಂದಳ್ಳಿ ರಸ್ತೆ	6.00	5.00	1.00
2.	ಕೂಡ್ಲೂರು-ಹೊಸಳ್ಳಿ-ಕನ್ನೇಗಾಲ	4.00	1.00	3.00
3.	ಕೋಟಂಬಳ್ಳಿ-ಹೊಮ್ಮ ರಸ್ತೆ	3.20	-	3.20
4.	ಕಾಗಲವಾಡಿ-ಗೋಳಿಪುರ ರಸ್ತೆ	4.80	4.80	-
5.	ಕಾಗಲವಾಡಿ-ಜ್ಯೋತಿಗೌಡನಪುರ	4.40	3.40	1.00
6.	ಕಾಗಲವಾಡಿ-ಕೋಟಂಬಳ್ಳಿ ರಸ್ತೆ	1.00	-	1.00
7.	ರೇಚಂಬಳ್ಳಿ-ಬೂದಂಬಳ್ಳಿ ರಸ್ತೆ	2.40	-	2.40
8.	ಮೇಲ್ಕಾಳ-ನಂಜರಾಜಪುರ ರಸ್ತೆ	2.00	-	2.00
9.	ಹೊಮ್ಮ-ಗೂಳೀಪುರ ರಸ್ತೆ	4.30	-	4.30
10.	ಮಸಣಾಪುರ-ಕಳ್ಳೀಪುರ-ಗಂಗಾವಾಡಿ	5.60	0.80	5.00
11.	ಸುತ್ತೂರು-ಗಂಗವಾಡಿ ರಸ್ತೆ	3.00	-	3.00

1	2	3	4	5
12.	ಇರಸವಾಡಿ-ಬೂದಂಬಳ್ಳಿ ಮೊಳೆ-ಬೂದಂಬಳ್ಳಿ ಮಾರ್ಗ	5.00	-	5.00
13.	ರೇಚಂಬಳ್ಳಿ-ಹೆಚ್.ಮೂಕಳ್ಳಿ-ಬೂದಂಬಳ್ಳಿಯಿಂದ-ಕಾಗಲವಾಡಿ-ಗೂಳೀಪುರ ರಸ್ತೆ	5.00	-	5.00
14.	ಹೊಂಗನೂರಿನಿಂದ-ಹೊಮ್ಮ-ಗೂಳೀಪುರ ಮಾರ್ಗ	5.00	-	5.00
15.	ಹೊಂಗನೂರು-ಜ್ಯೋತಿಗೌಡನಪುರ ರಸ್ತೆ	4.00	3.00	1.00
16.	.....	5.00	-	5.00
17.	ರೇಚಂಬಳ್ಳಿ-ಬೆಲ್ಲತ್ತಾ-ಮಂಚಪಾಳ್ಯ ರಸ್ತೆ	11.00	-	11.00
18.	ಹೊಂಗನೂರು-ಏರಿಕೆರೆ ರಸ್ತೆ	5.00	-	5.00
19.	ಸಂತೇಮರಹಳ್ಳಿ-ಬಿ.ಎಸ್.ಪಿ. ರಸ್ತೆಯಿಂದ (ಮುಖ್ಯ ರಸ್ತೆ ಆಲಹಳ್ಳಿ ರಸ್ತೆ)	3.00	-	3.00
20.	ಬಿ.ಎಸ್.ಪಿ. ರಸ್ತೆ ಮುಖ್ಯ ರಸ್ತೆಯಿಂದ-ಉಲ್ಲೇಪುರ ರಸ್ತೆ	3.00	-	3.00
21.	ಕೆ.ಕೆ. ರಸ್ತೆಯಿಂದ (ಮುಖ್ಯ) 10ನೇ ಮೈಲಿನಿಂದ ಕೆಂಪನಪುರ ಮರಹಳ್ಳಿ ಮುಖಾಂತರ	3.00	-	3.00
22.	ಬಿ.ಎಸ್.ಪಿ. ರಸ್ತೆಯಿಂದ-ಬನಹಟ್ಟಿ-ಸಂತೇಮರಹಳ್ಳಿ ರಸ್ತೆ	3.00	-	3.00
23.	ಬಿ.ಎಸ್.ಪಿ. ರಸ್ತೆ-ಹೊನ್ನೂರು-ಕಾಗವಾಡಿ ರಸ್ತೆ	4.00	-	4.00

1	2	3	4	5
24.	ಸಂತೇಮರಹಳ್ಳಿ-ಕಾಗವಾಡಿ-ಹೊನ್ನೂರು ರಸ್ತೆ	2.00	-	2.00
25.	ಕುದೇರು-ದೇಮಹಳ್ಳಿ-ಮೂಗೂರು ರಸ್ತೆ	10.80	5.00	5.80
26.	ಬಾಣಹಳ್ಳಿ-ಬಾಗಳಿ ರಸ್ತೆ-ಜನ್ನೂರು ರಸ್ತೆ	8.90	8.90	-
27.	ಕುದೇರು-ಬಾಣಹಳ್ಳಿ ರಸ್ತೆ ಕಮರವಾಡಿ ರಸ್ತೆ ಮಾರ್ಗ	6.00	1.00	5.00
28.	ಬಿ.ಎಸ್.ಪಿ. ರಸ್ತೆಯಿಂದ-ದೇಮಹಳ್ಳಿ ರಸ್ತೆ	6.00	3.00	3.00
29.	ಕೆ.ಕೆ. ರಸ್ತೆಯಿಂದ-ದೇಮಹಳ್ಳಿ-ಮೂಡ್ಲ ಅಗ್ರಹಾರ	8.60	2.60	6.00
30.	ಕುದೇರು-ದಾಸನೂರು ರಸ್ತೆ	4.80	-	4.80
31.	ಉಮ್ಮತ್ತೂರು-ಬಾಗಳಿ ರಸ್ತೆ ಲಿಂಗಸಪುರ ಮಾರ್ಗ	4.80	-	4.80
32.	ಬಡಗಲಮೊಳೆ-ಕುಬೇರು ರಸ್ತೆ	2.00	-	2.00
33.	ತೆಂಕಲಮೊಳೆ-ಕುದೇರು ರಸ್ತೆ	2.00	-	2.00
34.	ದೇಮಹಳ್ಳಿ-ಉಮ್ಮತ್ತೂರು ರಸ್ತೆ	3.00	-	3.00
35.	ಬಾಗಳಿ-ಹೊನ್ನೂರು ರಸ್ತೆ	2.00	-	2.00
36.	ಹೆಗ್ಗವಾಡಿ-ದೇಮಹಳ್ಳಿ ರಸ್ತೆ	5.00	-	5.00
37.	ಕೆ.ಕೆ. ರಸ್ತೆಯಿಂದ-ಯಾಲಕ್ಕೂರು ರಸ್ತೆ	2.00	1.00	1.00

1	2	3	4	5
38.	ಉಮ್ಮತ್ತೂರು-ಜನ್ನೂರು-ಲಿಂಗನೂರು ರಸ್ತೆ	10.00	8.00	2.00
39.	ಆಲೂರು-ಜನ್ನೂರು-ಕಾಮಹಳ್ಳಿ ರಸ್ತೆ	8.00	6.00	2.00
40.	ಹೊನ್ನೂರು-ಯಕನೂರು ರಸ್ತೆ	3.00	-	3.00
41.	ಜನ್ನೂರು-ಕಾರಾಪುರ ರಸ್ತೆ	4.00	-	4.00
42.	ಹಳ್ಳಿ ಕೆರೆಹುಂಡಿ-ಕಾರಾಪುರ ರಸ್ತೆ	3.00	-	3.00
43.	ಚಂದಕವಾಡಿ-ಅಂಚಿತಾಳಪುರ ರಸ್ತೆ	5.00	-	5.00
44.	ಕೋಡಿಮೊಳೆ-ಬಸವನಪುರ ರಸ್ತೆ-ಹೆಬ್ಬಸೂರು ರಸ್ತೆ	7.00	0.80	6.20
45.	ಚಂದಕವಾಡಿ-ದಡದಹಳ್ಳಿ-ಕುಂಭೇಶ್ವರ ಕಾಲೋನಿ ರಸ್ತೆ	6.00	6.00	-
46.	ದಡದಹಳ್ಳಿ-ಅಯ್ಯನಪುರ-ಮಲ್ಲದೇವನಹಳ್ಳಿ ರಸ್ತೆ	8.00	-	8.00
47.	ಕುಂಭೇಶ್ವರ ಕಾಲೋನಿಯಿಂದ-ಕಾಳಿಕಾಂಬ ಕಾಲೋನಿ ರಸ್ತೆ	4.00	-	4.00
48.	ದಡದಹಳ್ಳಿ-ಅರಳೀಪುರ-ಹೆಬ್ಬಸೂರು ಕೂಡು ರಸ್ತೆ	4.40	-	4.40
49.	ಹೆಬ್ಬಸೂರು-ಸಿದ್ದಯ್ಯನಪುರ ಕೂಡು ರಸ್ತೆ	8.00	-	8.00
50.	ಚಂದಕವಾಡಿ-ಹೆಬ್ಬಸೂರು ರಸ್ತೆ	3.60	3.60	-
51.	ಚಂದಕವಾಡಿ-ಬಸಪ್ಪನಪಾಳ್ಯ ರಸ್ತೆ	2.00	2.00	-

1	2	3	4	5
52.	ಲಿಂಗರಾಜಪುರ-ಸರಗೂರು ಮೊಳೆ ರಸ್ತೆ	1.50	-	1.50
53.	ನಲ್ಲೂರು-ಜ್ಯೋತಿಗೌಡನಪುರ ರಸ್ತೆ	8.00	8.00	-
54.	ಜ್ಯೋತಿಗೌಡನಪುರ-ಮೇಲ್ಕಾಳ ರಸ್ತೆ	4.00	-	4.00
55.	ನಾಗವಳ್ಳಿ-ಕೊಕ್ಕನಹಳ್ಳಿ-ಮಲ್ಲದೇವನಹಳ್ಳಿ ರಸ್ತೆ	9.00	-	9.00
56.	ನಾಗವಳ್ಳಿ-ಪುಟ್ಟನಪುರ-ಮಲ್ಲದೇವನಹಳ್ಳಿ ರಸ್ತೆ	7.00	-	7.00
57.	ಕೋಳಿಪಾಳ್ಯ ರಸ್ತೆ-ಈರಯ್ಯನಪುರ-ಎತ್ತೇಗೌಡನದೊಡ್ಡಿ ರಸ್ತೆ	4.00	2.00	2.00
		274.10	75.40	198.20

ಶ್ರೀ ಕೃಷ್ಣಮೂರ್ತಿಯವರು, ಶಾಸಕರು, ಸಂತೆಮರಹಳ್ಳಿ ವ್ಯಾಪ್ತಿ ಸಂಖ್ಯೆ 1675ಕ್ಕೆ ಜೇಷ್ಠತಾ ಪಟ್ಟಿ

ನಂಜನಗೂಡು ತಾಲ್ಲೂಕು ಸಂತೇಮರಹಳ್ಳಿ ಕ್ಷೇತ್ರದ ವ್ಯಾಪ್ತಿಯ ರಸ್ತೆಯ ವಿವರಗಳು

ಕ್ರ.ಸಂ.	ರಸ್ತೆಯ ಹೆಸರು	ವರ್ಗ	ಉದ್ದ ಕಿ.ಮೀ	ಡಾಂಬರು	ಜಲ್ಲಿ ರಸ್ತೆ	ಮೋಟಾ ರಬಲ್	ನಾನ್ ಮೋಟರಬಲ್	ಷರಾ
1	2	3	4	5	6	7	8	9
1)	3408ನೇ ಮೈಲಿಯ ಕೆ.ಎನ್. ರಸ್ತೆಯಿಂದ ಕೂಡ್ಲಾಪುರ ಮಾರ್ಗ ಕಬ್ಬೀಪುರಕ್ಕೆ ಹೋಗುವ ರಸ್ತೆ	ಇತರೆ ಜಿಲ್ಲಾ ರಸ್ತೆ	9.50	5.10	4.50	9.50	-	-

1	2	3	4	5	6	7	8	9
	ಗ್ರಾಮಾಂತರ ರಸ್ತೆ							
1)	ನಂಜನಗೂಡು-ಹುಣಸೂರು ರಸ್ತೆಯಿಂದ-ಕೋಣನೂರು-ಕೊಣನಪುರ ಮಾರ್ಗ ಎಸ್.ಪಿ. ರಸ್ತೆಗೆ ಸೇರುವ ರಸ್ತೆ	ಗ್ರಾಮಾಂ ಸಂ. ರಸ್ತೆ	5.00	3.00	2.00	5.00	-	-
2)	ಕೋಡಿಬಸವೇಶ್ವರ ಸ್ವಾಮಿ ದೇವಸ್ಥಾನದ ರಸ್ತೆಯಿಂದ 4:10ನೇ ಮೈಲಿಯ ನಂಜನಗೂಡು ಪುಣಜನೂರು ರಸ್ತೆ ಸೇರುವ ರಸ್ತೆ.	-"-	4.40	1.00	3.40	4.40	-	-
3)	ದಾನಸೂರು-ಕೊರವಳ್ಳಿ ರಸ್ತೆ	-"-	6.40	2.75	3.55	6.40	-	-
4)	ಚಿನ್ನಂಬಳ್ಳಿಯಿಂದ ಕಾರ್ಯೆ ಮಾರ್ಗವಾಗಿ ಕೆ.ಕೆ. ರಸ್ತೆಗೆ ಸೇರುವ ರಸ್ತೆ	-"-	7.20	2.00	5.20	7.20	-	-
5)	ಚಿನ್ನಂಬಳ್ಳಿಯಿಂದ ಕಾರಾಪುರ ಮಾರ್ಗವಾಗಿ ತಾಲ್ಲೂಕು ಗಡಿವರೆಗಿನ ರಸ್ತೆ	-"-	6.40	-	6.40	6.40	-	-
6)	ಹೆಡತೆರೆಯಿಂದ ಹೆಮ್ಮರಗಾಲ ಮಾರ್ಗವಾಗಿ ಕೂಡ್ಲಾಪುರಕ್ಕೆ ಹೋಗುವ ರಸ್ತೆ	-"-	8.00	1.50	2.50	4.00	4.00	-
7)	ಬಸವಟ್ಟಿಯಿಂದ ಹೆಡತರೇ ಮಾಡ್ರಹಳ್ಳಿ ಉಪ್ಪಿನಹಳ್ಳಿ ಮಾರ್ಗ ಬಿ.ಎಸ್. ರಸ್ತೆಗೆ ಸೇರುವ ರಸ್ತೆ	-"-	10.00	1.60	8.40	10.00	-	-
8)	ದಾಸನೂರಿನಿಂದ ಪಿ. ಮರಹಳ್ಳಿ ರಸ್ತೆ	-"-	3.50	-	1.50	3.50	-	-

1	2	3	4	5	6	7	8	9
9)	ಕುರಹಟ್ಟಿಯಿಂದ ಕೂಡ್ಲಾಪುರ ರಸ್ತೆ	-"-	4.00	-	1.50	4.00	-	-
10)	ಗಟ್ಟವಾಡಿಪುರದಿಂದ ಮುಕ್ಕಡಹಳ್ಳಿಗೆ ಸೇರುವ ರಸ್ತೆ	-"-	3.00	-	3.00	3.00	-	-
11)	ಗಟ್ಟವಾಡಿಪುರದಿಂದ ಹಳೇಪುರದ ರಸ್ತೆ	ಗ್ರಾ.ರಸ್ತೆ	6.00	-	2.00	6.00	-	-
12)	ಹೆಮ್ಮರಗಾಲದಿಂದ-ಕುಂಬರಹಳ್ಳಿ-ಸಿಂಧುವಳ್ಳಿ ಮಾರ್ಗ ಬಿ.ಎಸ್. ರಸ್ತೆ ಸೇರುವ ರಸ್ತೆ	-"-	7.00	-	-	2.00	5.00	-
13)	ದೊಡ್ಡಕೌವಲಂದೆ-ದೇವನೂರು ರಸ್ತೆ	-"-	4.00	4.00	-	4.00	-	-
14)	ದೊಡ್ಡಕೌವಲಂದೆ-ಗಟ್ಟವಾಡಿಪುರಕ್ಕೆ ಹೋಗುವ ರಸ್ತೆ	-"-	6.40	5.40	1.00	6.40	-	-
15)	ಎಂ.ಹೆಚ್. ಫಾಟ್ ರಸ್ತೆಯಿಂದ ಕೋಣನೂರು ಪಾಳ್ಯ ಮಾರ್ಗವಾಗಿ ಪಿ. ಪುರಹಳ್ಳಿಗೆ ಸೇರುವ ರಸ್ತೆ	-"-	5.00	-	1.50	2.00	3.00	
16)	ಕಾರ್ಯದಿಂದ ಕೌರಾಪುರ ರಸ್ತೆ	-"-	1.60	0.20	-	1.00	-	ನಬಾರ್ಡ್‌ಗೆ ವಹಿಸಲಾಗಿದೆ.
17)	ಕುಂದಾಪುರದಿಂದ ಹಾಲ್ಕಮಾರ್ಗ-ಕಾಮಹಳ್ಳಿಗೆ ಹೋಗುವ ರಸ್ತೆ	-"-	7.00	-	2.50	4.00	3.00	-
18)	ಹುಣಸನಾಳುವಿನಿಂದ-ಚಿಕ್ಕಾಟಿಗೆ ಹೋಗುವ ರಸ್ತೆ	-"-	2.00	-	-	2.00	-	-
19)	ಹಾಡ್ಯದಿಂದ ಗಣಿಗನೂರು ತಾಲ್ಲೂಕುಗಡಿವರೆಗೆ ಹೋಗುವ ರಸ್ತೆ	-"-	2.00	-	2.00	2.00	-	-

1	2	3	4	5	6	7	8	9
20)	ದೇವನೂರಿನಿಂದ ವರಹಳ್ಳಿಗೆ ರಸ್ತೆ	-"-	1.50	-	0.40	1.50	-	-
21)	ದೇವನೂರಿನಿಂದ ನಂಜನಹಳ್ಳಿ ಮಾರ್ಗ ಚುಂಚನಹಳ್ಳಿ ರಸ್ತೆ	-"-	4.70	-	3.50	4.70	-	-
22)	ದೇವನೂರು-ಚುಂಚನಹಳ್ಳಿ ರಸ್ತೆಯಿಂದ ವರಹಳ್ಳಿಗೆ ಹೋಗುವ ರಸ್ತೆ	-"-	2.50	-	0.20	2.50	-	-
23)	ಕಾರ್ಯದಿಂದ ಅರಳೀಕಟ್ಟೆಹುಂಡಿ ಮಾರ್ಗ ಹಾಡ್ಯಕ್ಕೆ ಹೋಗುವ ರಸ್ತೆ	-"-	2.50	-	-	2.50	-	-
24)	ನೇರಳೆಯಿಂದ ಹಂಪಾಪುರ ಮಾರ್ಗ ಭುಜಂಗಯ್ಯನಹುಂಡಿ ರಸ್ತೆ	-"-	3.00	-	0.60	1.00	2.00	-
25)	ನೇರಳೆಯಿಂದ ಗಟ್ಟವಾಡಿ ರಸ್ತೆ	-"-	4.00	-	3.40	4.00	-	-
26)	ಹಳೇಪುರದಿಂದ ಬಿ.ಹೆಚ್.ಎಸ್. ರಸ್ತೆ	-"-	3.00	-	1.00	2.00	1.00	
27)	ಕೂಡ್ಲಾಪುರದಿಂದ ಮಲ್ಲುಹಳ್ಳಿ ರಸ್ತೆ	-"-	2.00	-	-	-	2.00	-
28)	ಕೂಡ್ಲಾಪುರದಿಂದ ಬಾಗೂರು ರಸ್ತೆ	-"-	2.00	-	-	2.00	-	-
29)	ಬಾಗೂರಿನಿಂದ ಚಿಕ್ಕಾಟಿ ರಸ್ತೆ	ಗ್ರಾ.ರಸ್ತೆ	2.00	-	-	-	2.00	-
30)	ಹಳೇಪುರದಿಂದ ಬಿ.ಹೆಚ್.ಎಸ್. ರಸ್ತೆ ಮೂಲಕ ಕಟ್ಟೆ-ಕಬ್ಬೀಪುರದ ರಸ್ತೆ	-"-	5.00	1.20	1.00	5.00	-	-

1	2	3	4	5	6	7	8	9
31)	ನೇರಳೆಯಿಂದ ಹಂಪಾಪುರ ಮಾರ್ಗ ಹಳೇಪುರ ಗಟ್ಟವಾಡಿ ಸೇರುವ ರಸ್ತೆ	-"-	4.00	-	1.00	3.00	1.00	
32)	ಹೆಡತಲೆಯಿಂದ ಕುಂಬರಹಳ್ಳಿಗೆ ಹೋಗುವ ರಸ್ತೆ	-"-	5.00	-	-	5.00	-	-
33)	ದೊಡ್ಡಹೊಮ್ಮದಿಂದ ಪಿ. ಮರಹಳ್ಳಿ ಮಾರ್ಗ ಪಣ್ಯದ ಹುಂಡಿ ಎಮ್ಮತ್ತೂರು ರಸ್ತೆಗೆ ಸೇರುವ ರಸ್ತೆ	-"-	5.00	0.20	4.80	5.00	-	-
34)	ದಾಸನೂರು ತೊರವಳ್ಳಿ ರಸ್ತೆಯಿಂದ ಅಂಕುಶ ರಾಯನಪುರ ಮಾರ್ಗ ಮೂಕಹಳ್ಳಿಗೆ ಹೋಗುವ ರಸ್ತೆ	-"-	3.00	-	-	3.00	-	
35)	ತೊರವಳ್ಳಿ ಮೋಳೆಯಿಂದ ಅಂಕುಶ ರಾಯನಪುರದ ರಸ್ತೆ	-"-	2.00	-	-	2.00	-	
36)	ಅಂಕುಶರಾಯನಪುರದಿಂದ ಹೊನ್ನೇಗೌಡನ ಹುಂಡಿಗೆ ಹೋಗುವ ರಸ್ತೆ	-"-	1.50	-	-	-	1.50	
37)	ಕೋಣನೂರಿನಿಂದ ಪಿ. ಮರಹಳ್ಳಿಗೆ ಹೋಗುವ ರಸ್ತೆ	-"-	7.00	-	-	3.00	4.00	
38)	ಕುಂಬರಹಳ್ಳಿ-ಕೂಡ್ಲಾಪುರ ರಸ್ತೆ	-"-	3.00	-	0.80	2.20	-	-
39)	ಗಟ್ಟವಾಡಿಪುರದಿಂದ ಹರಗನಪುರ-ಹಳವರಹುಂಡಿ ಮಾರ್ಗ ತಾಲ್ಲೂಕುಗಡಿವರೆಗೆ ರಸ್ತೆ	-"-	4.00	-	3.00	4.00	-	-
		-"-	175.20	26.90		143.90	31.30	

ಅನುಬಂಧ - 'ಬ'

ಕೆಳಕಂಡ ರಸ್ತೆಗಳನ್ನು ಡಾಂಬರೀಕರಣ ಮಾಡಲಾಗಿದೆ

ಕ್ರ.ಸಂ.	ರಸ್ತೆಯ ಹೆಸರು	ಕಿ.ಮೀ.
	1998-99	
1.	ಅಲೂರು ಹೊಮ್ಮಕಂದಹಳ್ಳಿ ರಸ್ತೆ	0.75
2.	ಮಸಣಾಪುರ - ಕಲ್ಲುಪುರ ಗಂಗಮಾಡಿ	0.80
3.	ಹೊಂಗನೂರು - ಜ್ಯೋತಿಗೌಡನಪುರ	1.00
4.	ಕುದೇರು - ದೇಮಹಳ್ಳಿ ಮುಂಗೂರು ರಸ್ತೆ	1.00
5.	ಉಮ್ಮತ್ತೂರು - ಜನ್ನೂರು ಗಣಗನೂರು ರಸ್ತೆ	2.00
6.	ಅಲ್ಬೂರು - ಜನ್ನೂರು ಕಾಮನಹಳ್ಳಿ ರಸ್ತೆ	1.00
7.	ಕೋಡಿಮೋಳೆ ಬಸವನಪುರ ಹೆಬ್ಬಸೂರು ರಸ್ತೆ	0.50
8.	ಅರಮಕಮಾಡಿ - ಹೆಬ್ಬಸೂರು ರಸ್ತೆ	3.60
9.	ಚಂದಕಮಾಡಿ - ಬಸವಪ್ಪನಪಾಳ್ಯ ರಸ್ತೆ	2.00
10.	ನಲ್ಲೂರು ಜ್ಯೋತಿಗೌಡನಪುರ	2.60
11.	ನಾಗವಳ್ಳಿ - ಕೊಕ್ಕನಹಳ್ಳಿ ಮಲ್ಲೇದೇವನಹಳ್ಳಿ ರಸ್ತೆ	0.50
12.	ದಾಸನೂರುತೊರವಳ್ಳಿ ರಸ್ತೆ	0.10
13.	ದೊಡ್ಡ ಕಾವಲಂದೆ ದೇವನೂರು ರಸ್ತೆ	1.40
14.	ಕಾರ್ಯ-ಕಾರಾಪುರ ರಸ್ತೆ	0.20
15.	ಕಾರ್ಯಸಿದ್ಧೇಶ್ವರ ಸ್ವಾಮಿ ಬೆಟ್ಟದ ರಸ್ತೆ	0.25
16.	ಜಿ.ಎನ್. ರಸ್ತೆಯಿಂದ ಹೊಡ್ಲಾಪುರ-ತರದಲೆ ಮಾರ್ಗ ಕೆಬ್ಬೇಪುರಕ್ಕೆ ಹೋಗುವ ರಸ್ತೆ	0.80
	ಒಟ್ಟು	18.50
	1999-2000	
1.	ಕಾಗಲವಾಡಿ - ಗೋಪೀಪುರ ರಸ್ತೆ	1.80

ಕ್ರ.ಸಂ.	ರಸ್ತೆಯ ಹೆಸರು	ಕಿ.ಮೀ.
2.	ಕಾಗಲವಾಡಿ - ಜ್ಯೋತಿಗೌಡನಪುರ ರಸ್ತೆ	0.65
3.	ಆಲ್ದೂರು - ಜನ್ನೂರು - ಕಾಮಹಳ್ಳಿ ರಸ್ತೆ	1.00
4.	ಚಂದಕವಾಡಿ - ದಡದಹಳ್ಳಿ, ಕುಂಭೇಶ್ವರ ಕಾಲೋನಿ ರಸ್ತೆ	6.00
5.	ನಲ್ಲೂರು - ಜ್ಯೋತಿಗೌಡನಪುರ ರಸ್ತೆ	0.90
6.	ನಾಗವಳ್ಳಿ - ಕೊಕ್ಕನಹಳ್ಳಿ ರಸ್ತೆ	0.50
7.	ದೊಡ್ಡ ಕಾವಲಂದೆ ದೇವನೂರು ರಸ್ತೆ	1.30
8.	ಹೆಡತಲೆಯಿಂದ ಹೆಮ್ಮರವಾಲದ ರಸ್ತೆ	1.40
	ಒಟ್ಟು	16.55
	2000-2001	
1.	ಬಾಣಹಳ್ಳಿ - ಬಾಗಳ್ಳಿ ಜನ್ನೂರು ರಸ್ತೆ	8.90
2.	ಕೆ.ಕೆ. ರಸ್ತೆಯಿಂದ ಹನುಮನಪುರದ ರಸ್ತೆ	0.25
3.	ನಂಜನಗೂಡು-ಪುಣಜನೂರು ರಸ್ತೆಯಿಂದ ಕೋಣನೂರು-ಕೋಣನಪುರ ಮಾರ್ಗ ಎಸ್.ಪಿ. ರಸ್ತೆಗೆ ಸೇರುವ ರಸ್ತೆ	0.15
4.	ಜಿ.ಎನ್. ರಸ್ತೆಯಿಂದ ಕೂಡ್ಲಾಪುರ-ತರದಲೆ ಮಾರ್ಗ ಕೆಬ್ಬೇಪುರಕ್ಕೆ ಹೋಗುವ ರಸ್ತೆ	1.00
5.	ಹೆಡತಲೆಯಿಂದ ಹೆಮ್ಮರವಾಲದ ರಸ್ತೆ	1.00
	ಒಟ್ಟು	11.30

ಶ್ರೀ ಎ.ಆರ್. ಕೃಷ್ಣಮೂರ್ತಿ: ಮಾನ್ಯ ಸಚಿವರನ್ನು ಈ ಜಿಲ್ಲಾ ಪಂಚಾಯಿತಿ ಮೂಲಕ ಸಂತೇಮಾರನಹಳ್ಳಿ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ರಸ್ತೆಗಳು ಯಾವುವು? ಎಂದು ನಾನು ಕೇಳಿದ್ದೆ. ಇದರ ಜೊತೆಗೆ ನನ್ನ 'ಆ' ಪ್ರಶ್ನೆಯನ್ನು ಕೂಡ ಕೇಳಿದ್ದಕ್ಕೆ ಮಾನ್ಯ ಸಚಿವರು ಕೊಟ್ಟಂಥ ಉತ್ತರವನ್ನು ನೋಡಿದಾಗ ನನಗೆ ಆಶ್ಚರ್ಯವಾಗುತ್ತದೆ. ಏಕೆಂದರೆ, ಜಿಲ್ಲಾ ಪಂಚಾಯಿತಿಯಿಂದ ಡಾಂಬರೀಕರಣಗೊಂಡ ರಸ್ತೆಗಳು ಯಾವುವು ಎಂದು ನಾನು ಪ್ರಶ್ನೆ ಕೇಳಿದರೆ, ಡಾಂಬರೀಕರಣವಾಗಿರುವಂಥದ್ದು ನಬಾರ್ಡ್ ಯೋಜನೆಯಲ್ಲಿ ಏನಾಗಿದೆ, ಮಲೆನಾಡು ಮತ್ತು ಗಡಿ ಅಭಿವೃದ್ಧಿ ಯೋಜನೆಯಲ್ಲಿ ಏನಾಗಿದೆ, ಎಂಬ ವಿವರಗಳನ್ನು - ಎರಡೂ ಸೇರಿಸಿ ಇಲಾಖೆಯವರು ಮಾನ್ಯ ಸಚಿವರ ಮೂಲಕ ಕೊಟ್ಟಿದ್ದಾರೆ. ನಾನು ಸ್ಪಷ್ಟವಾಗಿ ಕೇಳಿದ ಪ್ರಶ್ನೆಗೆ ಇವರು ನಬಾರ್ಡ್, ಬಿಎಲ್‌ಡಿಪಿ ಮತ್ತು ಮಲ್ನಾಡ್ ಇವುಗಳ ಅಡಿಯಲ್ಲಿ ಡಾಂಬರೀಕರಣಗೊಂಡ ರಸ್ತೆಗಳ ಹೆಸರನ್ನು ಇಲ್ಲಿ ಕೊಟ್ಟಿದ್ದಾರೆ. ಇದರಲ್ಲಿ ನಾನು ಯಾವುದನ್ನು ಒಪ್ಪಿಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ: ಈ ಕ್ಷೇತ್ರದಲ್ಲಿ 102 ಕಿ.ಮೀ. ರಸ್ತೆ ಆಸ್ಫಾಲ್ಟ್ ಆಗಿದೆ. ಇನ್ನು 346 ಕಿ.ಮೀ. ರಸ್ತೆ ಆಸ್ಫಾಲ್ಟ್ ಆಗಬೇಕಾಗಿದೆ. ಕಳೆದ ವರ್ಷ 9 ಕಿ.ಮೀ. ರಸ್ತೆಯನ್ನು ಆಸ್ಫಾಲ್ಟ್ ಮಾಡಬೇಕೆಂದು ವಿಶೇಷವಾದ ಕಾರ್ಯಕ್ರಮವನ್ನು ಹಮ್ಮಿಕೊಂಡು. ಅದರಲ್ಲಿ 1.75 ಕಿ.ಮೀ. ರಸ್ತೆಯನ್ನು ಮಾತ್ರ ಮಾಡಿದ್ದಾರೆ. ಈ ಕ್ಷೇತ್ರದಲ್ಲಿ ಇನ್ನೂ ರಸ್ತೆ ಮಾಡಬೇಕೆನ್ನುವುದನ್ನು ನಾನು ಒಪ್ಪುತ್ತೇನೆ. ಇದಕ್ಕೆ ಒಂದೇ ಒಂದು ಉಪಾಯ ಏನೆಂದರೆ, ಸಡಕ್ ಯೋಜನೆಯಡಿಯಲ್ಲಿ 30 ಲಕ್ಷ ರೂಪಾಯಿಯ ರಸ್ತೆ ಈ ಕ್ಷೇತ್ರದಲ್ಲಿ ಮಾಡಲಿಕ್ಕೆ ನಾವು ಆದೇಶ ಕೊಡಲಿಕ್ಕೆ ಸಾಧ್ಯವಿದ್ದು ಅದನ್ನು ಮಾಡಿ ಕೊಡುತ್ತೇವೆ.

ಶ್ರೀ ಎ.ಆರ್. ಕೃಷ್ಣಮೂರ್ತಿ: ನನ್ನ ಪ್ರಶ್ನೆಗೆ ಮಾನ್ಯ ಸಚಿವರಿಂದ ಉತ್ತರ ಬರಲಿಲ್ಲ. ಮಾನ್ಯ ಸಚಿವರು ನಮ್ಮ ಕ್ಷೇತ್ರದಲ್ಲಿ 102 ಕಿ.ಮೀ. ರಸ್ತೆ ಡಾಂಬರೀಕರಣ ಆಗತಕ್ಕ ವಿಚಾರದಲ್ಲಿ ಅಂಕಿ ಅಂಶಗಳನ್ನು ಕೊಟ್ಟರು ಹಾಗೂ ನನ್ನ (ಈ) ಪ್ರಶ್ನೆಗೆ ಉತ್ತರವನ್ನು ಕೊಟ್ಟರು. ಅದು ಜಿಲ್ಲಾ ಪಂಚಾಯಿತಿ ರಸ್ತೆಗಳೆಂದು ನಾನು ಒಪ್ಪುತ್ತೇನೆ. ಆದರೆ ಅವರು ಕೊಟ್ಟಿರುವ ಅಂಕಿಅಂಶಗಳಲ್ಲಿ ಡಾಂಬರೀಕರಣ ಯಾವುದು ಆಗಿದೆ ಎಂದರೆ, ಪಿಡಬ್ಲ್ಯೂಡಿಯ ಮೂಲಕ ನಬಾರ್ಡ್ ಯೋಜನೆಯಲ್ಲಿ ಏನಾಗಿದೆ? ಉದಾಹರಣೆಗೆ ಹೇಳುವುದಾದರೆ, ಕಾಗವಾಡಿ - ಜ್ಯೋತಿಗೌಡನಪುರ ರಸ್ತೆ, ಆಲ್ಬೂರು - ಜನ್ನೂರು - ಕಾಮಹಳ್ಳಿ ರಸ್ತೆ, ಇವೆಲ್ಲವೂ ನಬಾರ್ಡ್ ಯೋಜನೆಯಲ್ಲಿ ಆಗಿರುವ ರಸ್ತೆಗಳು. ಅದೇ ರೀತಿ ಬಾಣಹಳ್ಳಿ ಬಾಗಹಳ್ಳಿ ಜನ್ನೂರು ರಸ್ತೆ, ಚಂದಕವಾಡಿ - ಹೆಬ್ಬಸೂರು ರಸ್ತೆ ನಬಾರ್ಡ್‌ನಲ್ಲಿ ಡಾಂಬರೀಕರಣವಾಗಿದೆ. ಓವರ್‌ಲ್ಯಾಪ್ ಆಗಬಾರದು ಎನ್ನುವ ದೃಷ್ಟಿಯಿಂದ ನಾನು ಇದನ್ನು ಇಲ್ಲಿ ಓದಿ ಹೇಳಬೇಕಾಗಿದೆ.

ಅಧ್ಯಕ್ಷರು: ನೀವು ಪ್ರತಿಯೊಂದು ರಸ್ತೆಗಳನ್ನು ಓದಿಕೊಂಡು ಹೋದರೆ ಹೇಗೆ? ಎಲ್ಲವನ್ನೂ ಇದರಲ್ಲಿ ಸೇರಿಸಿರುವುದರಿಂದ ತಪ್ಪಾಗಿದೆ ಇದನ್ನು ಸರಿ ಮಾಡಿಕೊಡಿ ಎಂದು ಆ ರೀತಿಯಲ್ಲಿ ತಾವು ಕೇಳಿ.

ಶ್ರೀ ಎ.ಆರ್. ಕೃಷ್ಣಮೂರ್ತಿ: ನಬಾರ್ಡ್ ಹಾಗೂ ಮಲ್ಲಾಡ್ ಅಭಿವೃದ್ಧಿ ಯೋಜನೆಗಳಲ್ಲಿ ಡಾಂಬರೀಕರಣವಾದ ರಸ್ತೆಗಳನ್ನು ಜಿಲ್ಲಾ ಪಂಚಾಯಿತಿಯ ಲೆಕ್ಕ ಶೀರ್ಷಿಕೆಯಲ್ಲಿ ತೋರಿಸಿ ಹಾಗೂ ಡ್ರಾ ಮಾಡಿಕೊಂಡು ಹೆಚ್ಚು ಕಡಿಮೆ ಆಗುವುದು ಬೇಡ. ಆದ್ದರಿಂದ, ತಾವು ದಯಮಾಡಿ ಸರಿಯಾದ ಅಂಕಿಅಂಶಗಳನ್ನು ತರಿಸಿಕೊಂಡು ಜಿಲ್ಲಾ ಪಂಚಾಯಿತಿಯ ಮೂಲಕ ಆಗುವ ಡಾಂಬರೀಕರಣ ಯಾವುದು? ಮಲ್ಲಾಡು ಗಡಿ ಅಭಿವೃದ್ಧಿ ಮತ್ತು ನಬಾರ್ಡ್ ಯೋಜನೆಯಡಿಯ ಡಾಂಬರೀಕರಣವಾದ ರಸ್ತೆ ಯಾವುದು ಎಂಬುದನ್ನು ವಿಂಗಡಿಸಿ ಅಂಕಿಸಂಖ್ಯೆಗಳನ್ನು ಕೊಟ್ಟರೆ ಬಹಳ ಸೂಕ್ತವೆಂದು ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

ಅಧ್ಯಕ್ಷರು: ಇದರಲ್ಲಿ ಮಿಕ್ಸ್‌ಅಪ್ ಆಗಿದೆ, ಆದ್ದರಿಂದ ಓವರ್‌ಲ್ಯಾಪ್ ಆಗುತ್ತದೆ. ಆದ್ದರಿಂದ ವಿಸ್ತರಿಸಿ ಎಲ್ಲಾ ಅಂಶಗಳನ್ನು ಕೊಡಿ ಎಂದು ಸದಸ್ಯರು ಕೇಳುತ್ತಿರುವುದರಿಂದ ನೀವು ಸರಿಯಾದ ಮಾಹಿತಿ ತರಿಸಿಕೊಳ್ಳಿ.

ಶ್ರೀ ಎಂ.ವೈ. ಘೋರ್ಪಡೆ: ನಬಾರ್ಡ್ ಹಾಗೂ ಪಿಡಬ್ಲ್ಯೂಡಿ ಯವರು ರಸ್ತೆ ಮಾಡಿದರೂ ಅದು ಜಿಲ್ಲಾ ಪಂಚಾಯಿತಿಯೇ ನೋಡಿಕೊಳ್ಳಬೇಕಾಗುತ್ತದೆ. 1998-99 ರಲ್ಲಿ

22.99 ಲಕ್ಷ 1999-00 ರಲ್ಲಿ 25.45 ಲಕ್ಷ, 2000-01 ರಲ್ಲಿ 31.03 ಲಕ್ಷ ರೂಪಾಯಿಗಳು ಬಿಡುಗಡೆಯಾಗಿದೆ. ಬೇರೆ ಬೇರೆ ಕಾರ್ಯಕ್ರಮದಡಿಯಲ್ಲಿ ರಸ್ತೆಗಳು ಆಗುತ್ತಿದ್ದು ಇದನ್ನು ವಿಂಗಡಿಸಿ ಹೇಳಿ ಎಂದು ತಾವು ಕೇಳುತ್ತಿದ್ದೀರಿ. ಆ ಪ್ರಕಾರವಾಗಿ ಕೊಡುವುದಕ್ಕೆ ಸಾಧ್ಯವಿದೆ. ಸಾಕಷ್ಟು ಕೆಲಸ ಜೆಡ್‌ಪಿ ಯಲ್ಲಿ ಆಗಿಲ್ಲವೆಂದು ತಾವು ಪ್ರಶ್ನೆ ಕೇಳುತ್ತಿದ್ದೀರಿ, ನಾನು ಅದನ್ನು ಒಪ್ಪುತ್ತೇನೆ, 138 ಕೋಟಿ ರೂಪಾಯಿ ಕಾರ್ಯಕ್ರಮದಲ್ಲಿ 3200 ಕಿ.ಮೀ. ರಸ್ತೆ ಇಡೀ ರಾಜ್ಯದಲ್ಲಿ ಏನು ಆಗಿದೆ ಅದರಲ್ಲಿ ತಮ್ಮ ಮತ ಕ್ಷೇತ್ರದಲ್ಲಿ 90 ಕಿ.ಮೀ. ರಸ್ತೆ ಮಾತ್ರ ಆಗಿದೆ. ಇದರಿಂದ ಅವರಿಗೆ ಅಸಾಮಾಧಾನವಾಗಿದ್ದರೆ ಅದನ್ನು ಸರಿಪಡಿಸಲಿಕ್ಕೆ ನಾನು ಈಗಾಗಲೇ ಚಿಂತನೆ ಮಾಡಿದ್ದೇನೆ. 30 ಲಕ್ಷ ರೂಪಾಯಿ ಹಣವನ್ನು ತಕ್ಷಣ ಬಿಡುಗಡೆಗೊಳಿಸಲಾಗುವುದು.

ಅಧ್ಯಕ್ಷರು: ನಿಮಗಿರುವ ತೊಂದರೆಯನ್ನು ಸರಿಪಡಿಸಿಕೊಡುತ್ತೇನೆಂದು ಮಾನ್ಯ ಸಚಿವರು ಹೇಳುತ್ತಿದ್ದಾರಲ್ಲ ಪುನಃ ನೀವು ಏಕೆ ಕೇಳುತ್ತೀರಿ?

ಶ್ರೀ ಎ.ಆರ್. ಕೃಷ್ಣಮೂರ್ತಿ: ಜಿಲ್ಲಾ ಪಂಚಾಯಿತಿಯಲ್ಲಿ ಅವೇ ರಸ್ತೆಗೆ ಬಿಲ್ ಮಾಡಿಕೊಂಡು ಓವರ್ ಲ್ಯಾಪ್ ಆಗಿ ಇದರಲ್ಲಿ ದುರುಪಯೋಗವಾಗುತ್ತದೆ. ಆದ್ದರಿಂದ ಇದಾಗಬಾರದು ಎನ್ನುವ ದೃಷ್ಟಿಯಿಂದ ನಾನು ಇಲ್ಲಿ ಕೇಳಬೇಕಾಯಿತು.

Mr. Speaker: On the floor of the House ಇವೆಲ್ಲಾ ಕೇಳಿಸುವುದಕ್ಕಾಗುವುದಿಲ್ಲ. ನನ್ನ ಸಲಹೆ ಏನೆಂದರೆ, ಅವರ ಕೊಠಡಿಗೆ ಹೋಗಿ ಎಲ್ಲಾ ಮಾಹಿತಿಗಳನ್ನು ನೀಡಿ ಸರಿಪಡಿಸಿಕೊಳ್ಳಿ. ಅವರು ಸರಿಪಡಿಸಿಕೊಡುತ್ತೇನೆಂದು ಹೇಳಿದರೂ ಇಲ್ಲಿ ಡಿಸ್‌ಕಸ್ ಮಾಡಿಕೊಂಡು ಕುಳಿತುಕೊಳ್ಳುವುದಕ್ಕೆ ಆಗುತ್ತದೆಯೇ? ಒಂದೊಂದು ರಸ್ತೆಯ ಬಗ್ಗೆ ಕೇಳುವುದಕ್ಕೆ ಆಗುತ್ತದೆಯೇ?

ಶ್ರೀ ಎ.ಆರ್. ಕೃಷ್ಣಮೂರ್ತಿ: ಇಲ್ಲಿ ಕೇಳದೇ ಮತ್ತೆಲ್ಲಿ ಕೇಳಲಿ? ನಾನು ಎಲ್ಲಾ ರಸ್ತೆಗಳ ಬಗ್ಗೆ ಕೇಳದೇ ಕೇವಲ ಅವರು ಕೊಟ್ಟಿರುವ ಅಂಕಿಅಂಶಗಳನ್ನು ಮಾತ್ರ ಹೇಳಲಿಚ್ಛಿಸುತ್ತೇನೆ.

ಅಧ್ಯಕ್ಷರು: ಸರಿಪಡಿಸಿಕೊಡುತ್ತೇನೆಂದು ಅವರು ಹೇಳಿದ ಮೇಲೂ ನೀವು ಇಲ್ಲಿ ಎಲ್ಲಾ ಹೇಳುವುದಕ್ಕೆ ಆಗುವುದಿಲ್ಲ, ಆದ್ದರಿಂದ ಅವರ ಕಛೇರಿಗೆ ನೀವು ಹೋಗಿ ಅಲ್ಲಿಗೆ ಇಲಾಖಾ ಕಾರ್ಯದರ್ಶಿಯವರನ್ನು ಕರೆಸುತ್ತಾರೆ, ನಿಮಗೆ ಆಗಿರುವ ಅನ್ಯಾಯವನ್ನು ಸರಿಪಡಿಸಿಕೊಡುತ್ತಾರೆ.

ಶ್ರೀ ಎ.ಆರ್. ಕೃಷ್ಣಮೂರ್ತಿ: ಆಯಿತು ಬಿಡಿ ಸಾರ್ ನಿಮ್ಮ ಮಾತಿನಂತೆ ನಾನು ಅವರ ಬಳಿ ಹೋಗುತ್ತೇನೆ.

ಅಧ್ಯಕ್ಷರು: ಅವರು ಸರಿಪಡಿಸುತ್ತೇನೆಂದು ಹೇಳಿದ ಮೇಲೆ ಇನ್ನೇನು ಇದೆ? ಮುಂದಿನ ಪ್ರಶ್ನೆ ಮಾನ್ಯ ಸೋಮಶೇಖರ್‌ರವರು ಕೇಳಿ.

ಎಸ್.ಎಸ್.ಎಲ್.ಸಿ. ಸಪ್ಲಿಮೆಂಟರಿ (ಅರ್ಧ ಪಾಸ್ಡ್‌ಗಳ) ಪರೀಕ್ಷೆ

159(1673) ಶ್ರೀ ಬಿ. ಸೋಮಶೇಖರ್ (ಮುಳಬಾಗಿಲು): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?